SRI DEVARAJ URS ACADEMY OF HIGHER EDUCATION & RESEARCH
SRI DEVARAJ URS MEDICAL COLLEGE
Tamaka, Kolar
UNIVERSITY LIBRARY & LEARNING RESOURCE CENTRE

ಕನ್ನಡಪ್ರಭ

Online Newspaper Clipping Service
Dtd- Monday, 9th, September- 2019



# ರಾಜ್ಯಕ್ಕೆ 6 ಹೊಸ ವೈದ್ಯಕೀಯ ಕಾಲೇಜು?

## ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಚಿತ್ರದುರ್ಗ, ಹಾವೇರಿ, ಯಾದಗಿರಿ ಹಾಗೂ ಬಾಗಲಕೋಟೆ ಜಿಲ್ಲೆಗಳಿಗೆ ಮೆಡಿಕಲ್ ಕಾಲೇಜು ಭಾಗ್ಯ?

### 2020ರಲ್ಲಿ ದೇಶಾದ್ಯಂತ 75 ಹೊಸ ವೈದ್ಯ ಕಾಲೇಜು | ಇದರಿಂದ ಕರ್ನಾಟಕಕ್ಕೆ 900 ಹೆಚ್ಚುವರಿ ವೈದ್ಯಕೀಯ ಸೀಟು ಲಭಿಸುವ ಸಾಧ್ಯತೆ

• **ಎಸ್.ಎಲ್.ಶಿವಮೂದು**
**ಕನ್ನಡಪ್ರಭ ವಾರ್ತೆ** ಬೆಂಗಳೂರು

ಕೇಂದ್ರ ಸರ್ಕಾರ 2020-21ನೇ ಸಾಲಿನಿಂದ ದೇಶಾದ್ಯಂತ 75 ನೂತನ ವೈದ್ಯಕೀಯ ಕಾಲೇಜುಗಳನ್ನು ಆರಂಭಿಸುವ ಘೋಷಣೆ ಮಾಡಿದೆ. ಈ ಪೈಕಿ ರಾಜ್ಯಕ್ಕೆ ಆರು ನೂತನ ವೈದ್ಯಕೀಯ ಕಾಲೇಜುಗಳು ಲಭ್ಯವಾಗುವ ಸಾಧ್ಯತೆಗಳಿದ್ದು, 900 ವೈದ್ಯ ಸೀಟುಗಳು ಹೆಚ್ಚಳವಾಗಲಿವೆ.

ಕೇಂದ್ರ ಸರ್ಕಾರ ಈ ಬಗ್ಗೆ ಪ್ರಸ್ತಾವನೆ ಸಲ್ಲಿಸುವಂತೆ ಕರ್ನಾಟಕ ವೈದ್ಯಕೀಯ ನಿರ್ದೇಶನಾಲಯಕ್ಕೆ ನಿರ್ದೇಶನ ನೀಡಿದೆ. ಸರ್ಕಾರಿ ಮತ್ತು ಖಾಸಗಿ ವೈದ್ಯಕೀಯ ಕಾಲೇಜುಗಳಿಲ್ಲದ ಜಿಲ್ಲೆಗಳನ್ನು ಗುರುತಿಸಿ ಪ್ರಸ್ತಾವನೆ ಸಲ್ಲಿಸುವಂತೆ ತಿಳಿಸಿದೆ. ಅದರಂತೆ, ನಿರ್ದೇಶನಾಲಯವು ರಾಜ್ಯದ ಆರು ಜಿಲ್ಲೆಗಳನ್ನು ಗುರುತಿಸಿ ಮುಂದಿನ ಒಂದು ವಾರದೊಳಗೆ ಪ್ರಸ್ತಾವನೆ ಸಲ್ಲಿಸಲಿದೆ. ಸದ್ಯದ ಮಾಹಿತಿ ಪ್ರಕಾರ ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಚಿತ್ರದುರ್ಗ, ಹಾವೇರಿ, ಯಾದಗಿರಿ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ವೈದ್ಯಕೀಯ ಕಾಲೇಜು ಆರಂಭಿಸಲು ಪ್ರಸ್ತಾವನೆ ಸಲ್ಲಿಸಲು ನಿರ್ಧರಿಸಲಾಗಿದೆ.



ಕೇಂದ್ರ ಸರ್ಕಾರದ ನಿರ್ದೇಶನದಂತೆ ರಾಜ್ಯದ ಆರು ಜಿಲ್ಲೆಗಳಲ್ಲಿ ನೂತನ ವೈದ್ಯಕೀಯ ಕಾಲೇಜುಗಳನ್ನು ಆರಂಭಿಸುವಂತೆ ಶೀಘ್ರವೇ ಪ್ರಸ್ತಾವನೆ ಸಲ್ಲಿಸಲಾಗುತ್ತದೆ. ಒಂದು ಕಾಲೇಜಿಗೆ 150 ಸೀಟಿನಂತೆ ಎಲ್ಲಾ ಕಾಲೇಜುಗಳಿಗೆ ಒಪ್ಪಿಗೆ ದೊರೆತರೆ 900 ಸೀಟುಗಳು ದೊರೆಯಲಿವೆ.

• **ಡಾ| ಪಿ.ಜಿ.ಗಿರೀಶ್**, ನಿರ್ದೇಶಕ, ವೈದ್ಯಕೀಯ ನಿರ್ದೇಶನಾಲಯ

ರಾಜ್ಯದಲ್ಲಿ ಆರು ಕಾಲೇಜುಗಳು ಆರಂಭವಾದರೆ ಒಂದು ಕಾಲೇಜಿಗೆ 150 ಸೀಟಿನಂತೆ ಆರು ಕಾಲೇಜಿಗೆ ಒಟ್ಟಾರೆ 900 ವೈದ್ಯಕೀಯ ಸೀಟುಗಳು ದೊರೆಯಲಿವೆ. ಸದ್ಯ ರಾಜ್ಯದಲ್ಲಿ 21 ಸರ್ಕಾರಿ ವೈದ್ಯಕೀಯ ಕಾಲೇಜುಗಳಿದ್ದು, 2700 ಸೀಟುಗಳು ದೊರೆಯುತ್ತಿವೆ. ಮತ್ತೆ 900 ಸೀಟುಗಳು ದೊರೆತರೆ ರಾಜ್ಯಕ್ಕೆ ಬಂಪರ್ ಹೊಡೆದಂತಾಗಲಿದೆ. ಇದು ಮುಂದಿನ ದಿನಗಳಲ್ಲಿ ರಾಜ್ಯದ ವೈದ್ಯಕೀಯ ವಿದ್ಯಾರ್ಥಿಗಳಿಗೆ ವರದಾನವಾಗಲಿದೆ.

ಜಿಲ್ಲೆಗಳಲ್ಲಿ 300 ಹಾಸಿಗೆ ಆಸ್ಪತ್ರೆ ಇರುವ ಕಡೆ ಪ್ರತಿ ಕಾಲೇಜಿಗೆ ಕನಿಷ್ಠ 150 ಸೀಟು ಸಿಗಲಿದೆ. ಇದಕ್ಕಿಂತಲೂ ಹೆಚ್ಚಿನ ಸೀಟುಗಳು ದೊರೆಯುವ ಸಾಧ್ಯತೆಗಳೂ ಇವೆ. ಶೀಘ್ರವೇ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದು ವೈದ್ಯಕೀಯ ನಿರ್ದೇಶನಾಲಯದ ನಿರ್ದೇಶಕ ಡಾ.ಪಿ.ಜಿ. ಗಿರೀಶ್ ಸ್ಪಷ್ಟಪಡಿಸಿದ್ದಾರೆ.

**5,400 ಕೋಟಿ ರು. ವೆಚ್ಚ:** ಪ್ರತಿ ಕಾಲೇಜಿಗೆ ಐದು ವರ್ಷಗಳ ಅವಧಿಗೆ ಕಟ್ಟಡ, ಪ್ರಯೋಗಾಲಯ, ಸಿಬ್ಬಂದಿ ಸೇರಿ 900 ಕೋಟಿ ರು. ವೆಚ್ಚವಾಗಬಹುದು ಎಂದು ಲೆಕ್ಕ ಹಾಕಲಾಗಿದೆ. ಅದರಂತೆ ಆರು ಕಾಲೇಜುಗಳಿಗೆ ಅಂದಾಜು 5,400 ಕೋಟಿ ರು. ವೆಚ್ಚವಾಗಲಿದೆ. ಈ ಪೈಕಿ ಕೇಂದ್ರ ಮತ್ತು ರಾಜ್ಯ ಸರ್ಕಾರ 60:40 ಅನುಪಾತದಲ್ಲಿ ಅನುದಾನ ನೀಡಲಿವೆ. ಹೊಸ ವೈದ್ಯಕೀಯ ಕಾಲೇಜುಗಳು ಆರಂಭವಾದರೆ ವೈದ್ಯಕೀಯ ವಿದ್ಯಾರ್ಥಿಗಳಿಗೆ, ಆರೋಗ್ಯ ವಲಯ ವೃದ್ಧಿಗೆ ಹಾಗೂ ಜಿಲ್ಲಾಸ್ಪತ್ರೆಗಳ ಅಭಿವೃದ್ಧಿಗೆ, ಗ್ರಾಮೀಣ ಪ್ರದೇಶಗಳಲ್ಲಿಯೂ ವೈದ್ಯಕೀಯ ಚಿಕಿತ್ಸೆ ದೊರೆಯಲು ಸಹಕಾರಿಯಾಗಲಿದೆ ಎಂದು ಮೂಲಗಳು ತಿಳಿಸಿವೆ.

ದೇಶಾದ್ಯಂತ 2020-21ನೇ ಸಾಲಿನಿಂದ ನೂತನವಾಗಿ 75 ವೈದ್ಯಕೀಯ ಕಾಲೇಜುಗಳನ್ನು ಆರಂಭಿಸಲಾಗುತ್ತಿದೆ. ಅವುಗಳಲ್ಲಿ ಹೆಚ್ಚುವರಿಯಾಗಿ 15,700 ವೈದ್ಯ ಸೀಟುಗಳು ದೊರೆಯಲಿವೆ. ಯಾವುದೇ ವೈದ್ಯಕೀಯ ಕಾಲೇಜು ಇಲ್ಲದ ಅಥವಾ ಕನಿಷ್ಠ 200 ಹಾಸಿಗೆಗಳ ಆಸ್ಪತ್ರೆಯುಳ್ಳ ಪ್ರದೇಶಗಳು ಇರುವ ಕಡೆ ವೈದ್ಯಕೀಯ ಕಾಲೇಜುಗಳನ್ನು ಆರಂಭಿಸಲು ಆದ್ಯತೆ ನೀಡಲಾಗುವುದು. 300 ಹಾಸಿಗೆಗಳಿರುವ ಜಿಲ್ಲಾ ಆಸ್ಪತ್ರೆಗಳಿರುವಲ್ಲಿಯೂ ಆದ್ಯತೆ ನೀಡಲಾಗುವುದು ಎಂದು ಕೇಂದ್ರ ಸರ್ಕಾರ ತಿಳಿಸಿರುವುದಾಗಿ ಇಲಾಖೆ ಮೂಲಗಳು ತಿಳಿಸಿವೆ.